ಅ) ಎರಡನೆ ವರ್ಷ ಹುದ್ದೆಗಳನ್ನು ತುಂಬಲು ಸಂದರ್ಶನ ನಡೆಸಿ ನಂತರ ಆ ಹುದ್ದೆಗಳನ್ನು ಲೋಕ ಸೇವಾ ಆಯೋಗಕ್ಕೆ ವಹಿಸಿಕೊಟ್ಟಿದ್ದರಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಅನ್ಯಾಯವಾಗಲಿಲ್ಲವೆ.

ಇ) ಈ ಜನಾಂಗಗಳ ಪ್ರತಿಭಾವಂತ ಪದವೀಧರರಿಗೆ ಹುದ್ದೆಗಳನ್ನು ಕೊಡಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) 1982-83 1983-84
44 07

ಆ) ಈ ರೀತಿ ಆಗಿಲ್ಲ.

ಇ) 1984-85ರಿಂದ 1993-94ಶೈಕ್ಷಣಿಕ ವರ್ಷಗಳಿಗೆ ಸಂಬಂಧಿಸಿದ ನೇಮಕಾತಿಯನ್ನು ಒಂದೇ ಬಾರಿಗೆ ಮಾಡುವ ಕ್ರಮ ತೆಗೆದುಕೊಂಡು ಈ ಪ್ರಕ್ರಿಯೆಯನ್ನು ಆದ್ಯತೆ ಮೇಲೆ ಮಾಡಲಾಗುತ್ತಿದೆ.

ಗುಲ್ಬರ್ಗಾ ಜಿಲ್ಲೆಯಲ್ಲಿ ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಯೋಜನೆಯಡಿಯಲ್ಲಿ ಕಾಮಗಾರಿ ಕೆಲಸ

649 - ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಸಣ್ಣ ಉಳಿತಾಯ, ಲಾಟರಿ, ಕೆ.ಜಿ.ಐ.ಡಿ. ಹಾಗೂ ಹೆಚ್.ಕೆ.ಡಿ.ಬಿ. ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯಲ್ಲಿ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಯ ಯೋಜನೆಯಡಿಯಲ್ಲಿ ಪ್ರತಿ ಕ್ಷೇತ್ರಕ್ಕೆ ಜಿಲ್ಲಾ ಪಂಚಾಯಿತಿ ಕಾಮಗಾರಿಗಳಿಗಾಗಿ ಶಾಸಕರಿಗೆ ನೀಡಿರುವ ಅಧಿಕಾರದ ಹಣ ಪ್ರಾರಂಭದಿಂದಲೂ 1993-94ನೇ ಸಾಲಿನವರೆವಿಗೂ ಮಂಜೂರು ಮಾಡಿದ ಹಾಗೂ ಖರ್ಚು ಮಾಡಿದ ಹಣ ಎಷ್ಟು? (ವಿವರ ನೀಡುವುದು)

ಶ್ರೀ ಮದನಗೋಪಾಲ ನಾಯಕ್ (ಸಣ್ಣ ಉಳಿತಾಯ, ಲಾಟರಿ, ಕೆ.ಜಿ.ಐ.ಡಿ. ಹಾಗೂ ಹೆಚ್.ಕೆ.ಡಿ.ಬಿ. ರಾಜ್ಯ ಸಚಿವರು) :

ಅ) ಸದರಿ ಮಾಹಿತಿಯು ಈ ಕೆಳಕಂಡಂತೆ ಇದೆ :

ಕ್ರ. ಸಂ.	ವಿಧಾನ ಸಭಾ ಮತ ಕ್ಷೇತ್ರ	1993-94ನೇ ಸಾಲಿನವರೆಗೆ ಮಂಜೂರಾದ ಕಾಮಗಾರಿಗಳ ಒಟ್ಟು ಮೊತ್ತ (ಲಕ್ಷ ರೂ. ಗಳಲ್ಲಿ)	ಜುಲೈ 94 ರವರೆಗೆ ಆದ ಖರ್ಚು (ಲಕ್ಷ ರೂ.ಗಳಲ್ಲಿ
1	2	3	4
1.	ಚಿಂಚೋಳಿ	328.57	97.11
2.	ಕಮಲಾಪುರ	211.86	135.14
3.	ಅಳಂದ	214.89	141,03
4.	ಶಹಾಬಾದ್	199.95	105.24
5.	ಅಫ್ಜಲ್‌ಪುರ	199.19	123.18

6.	ಚಿತ್ತಾಪೂರ	302.10	.71
7.	ಸೇಡಂ	218.07	.98
8.	ಜೇವರ್ಗಿ	153.15	.09
9.	ಗುರಮಿಟಕಾಲ	199.68	.04
10.	ಯಾದಗೀರ	206.48	.70
11.	ಶಹಾಪೂರ	152.41	.27
12.	ಶೋರಾಪೂರ	190.74	.81
	ಒಟ್ಟು	2577.09	.20

ಗುಲ್ಬರ್ಗಾ ಜಿಲ್ಲೆಯ ಸಂಚಾರ ಅನುಕೂಲಕ್ಕಾಗಿ ರಾಷ್ಟ್ರೀಕರಣ ಮೂ ಖಾಸಗೀ ವ್ಯವಸ್ಥೆ ಅನುಕೂಲ ಮಾಡಿಕೊಡುವುದು

650 - ಶ್ರೀ ಬಸವಂತ ರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಗುಲ್ಬರ್ಗಾ ಜಿಲ್ಲೆಯಲ್ಲಿ ನಾಗರೀಕರ ಸಂಚಾರದ ಅನುಕೂಲಕ್ಕಾಗಿ ರಾಷ್ಟ್ರೀಕರಣವಾಗಿ ಸಹ ಜನಸಂಚಾರಕ್ಕೆ ಅನಾನುಕೂಲತೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;*

ಆ) *ಈ ರಾಷ್ಟ್ರೀಕರಣಕ್ಕೆ ಬದಲು ಮೊದಲು ಖಾಸಗೀ ವಾಹನಗಳಲ್ಲಿ ಪ್ರಯಾಣಿಕರಿಗೆ ವೇಳೆಯಲ್ಲಿ ವಾಹನಗಳು ಸಂಚರಿಸಿ ಪ್ರತಿ ಗ್ರಾಮಕ್ಕೆ ಹೋಗುವುದರಿಂದ ಅನುಕೂಲತೆಗಳು ಇದ್ದಿಲ್ಲವೆ,*

ಇ) *ರಾಷ್ಟ್ರೀಕರಣ ಇದ್ದರೂ ಸಹ ಖಾಸಗೀಯವರಿಗೆ ಪರವಾನಿಗೆ ನೀಡಿ ಈ ಎರಡು ವ್ಯವಸ್ಥೆಗಳಿಂದ ನಾಗರೀಕರ ಸಂಚಾರಕ್ಕೆ ಅನುಕೂಲ ಮಾಡಿ ಕೊಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?*

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :

ಅ) ಇಲ್ಲ.

ಆ) ಸಾರಿಗೆ ಸೇವೆಯನ್ನು ಅತ್ಯುತ್ತಮವಾಗಿ ನಿರ್ವಹಿಸಲು ಸಾಕಷ್ಟು ಸೇವೆಯನ್ನು ನೀಡುವ ಸಲುವಾಗಿ ಮಾರ್ಗಗಳನ್ನು ರಾಷ್ಟ್ರೀಕರಣ ಮಾಡಲಾಗಿದೆ.

ಇ) ಸರ್ಕಾರವು ಹೊಸ ಸಾರಿಗೆ ನೀತಿಯನ್ನು ರೂಪಿಸುವ ಬಗ್ಗೆ ತೀವ್ರವಾಗಿ ಪರಿಶೀಲಿಸುತ್ತಿದ್ದು ಕೆಲವು ರಾಷ್ಟ್ರೀಕೃತ ಮಾರ್ಗಗಳನ್ನು ಖಾಸಗೀಕರಣಗೊಳಿಸುವ ಪ್ರಸ್ತಾವನೆಯೂ ಇರುತ್ತದೆ.

ಅಧ್ಯಕ್ಷರು : ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

ಪ್ರಕಟಣೆ

ಅಧ್ಯಕ್ಷರು : ಈಗ ಪ್ರಕಟಣೆ

1994-95ನೇ ಸಾಲಿನ ಪೂರಕ ಅಂದಾಜುಗಳ ಪ್ರಥಮ ಕಂತನ್ನು ವಿಧಾನಸಭೆಯಲ್ಲಿ ಮಂಡಿಸಲು ಸಂವಿಧಾನದ 205(1)ನೇ ಅನುಚ್ಛೇದದ ಪ್ರಕಾರ ಮಾನ್ಯ ರಾಜ್ಯಪಾಲರಿಂದ ಶಿಫಾರಸ್ಸು ಬಂದಿರುತ್ತದೆ.